ಶ್ರೀ ಆರ್. ವಿ. ದೇಶ್‌ಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) ಮೈಸೂರು ಕಾಗದ ಕಾರ್ಖಾನೆ ನಿಯಮಿತ ಭದ್ರಾವತಿ ಸಂಸ್ಥೆಗೆ 1980ನೇ ಇಸವಿಯಲ್ಲಿ ಸುಮಾರು 30 ಸಾವಿರ ಹೆಕ್ಟೇರ್ ಬೀಳುಬಿಟ್ಟ ಹಾಗೂ ಕ್ಷೀಣಿಸಿದ ಅರಣ್ಯ ಪ್ರದೇಶಗಳನ್ನು ಗುತ್ತಿಗೆ ಆಧಾರದ ಮೇಲೆ 40 ವರ್ಷಗಳ ಕಾಲಕ್ಕೆ ನೀಡಲಾಗಿದೆ. ಇದರಲ್ಲಿ ಬಹುಪಾಲು ಶಿವಮೊಗ್ಗ ಜಿಲ್ಲೆಯಲ್ಲಿದ್ದು ಅಲ್ಪಭಾಗ ಚಿಕ್ಕಮಗಳೂರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸರ್ವೆ ಅಳತೆ ಮಾಡಿಸಿ ಅರಣ್ಯ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ

ಇ) ಖಾಸಗಿ ಜಮೀನಿನಲ್ಲಿ ನೆಡುತೋಪು ಬೆಳೆಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಕಾರ್ತೀಕ್ ಇಂಡಸ್ಟ್ರೀಸ್‌ನವರಿಗೆ, ಮಂಜೂರಾಗಿರುವ ಕೈಗಾರಿಕಾ ಶೆಡ್ಡನ್ನು ತೆರವು ಗೊಳಿಸುವುದು

2942 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೆ: ಕಾರ್ತೀಕ್ ಇಂಡಸ್ಟ್ರೀಸ್ ಮಂಜೂರಾಗಿರುವ ಕೈಗಾರಿಕಾ ಶೆಡ್‌ನಲ್ಲಿ ನಡೆಸುತ್ತಿರುವ ವ್ಯಾಪಾರದ ಸ್ವರೂಪವೇನು?*

ಆ) *ಈಗ ಮಳಿಗೆಯಲ್ಲಿ ವ್ಯಾಪಾರ ವಹಿವಾಟು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಮಳಿಗೆ ಮಂಜೂರಾತಿಗೆ ಸರ್ಕಾರವು ಫಲಾನುಭವಿಯಿಂದ ಪಡೆದಿರುವ ಹಣವೆಷ್ಟು? ಬಾಕಿ ಬರಬೇಕಾದ ಹಣವೆಷ್ಟು?*

ಈ) *ಈ ಶೆಡ್ಡನ್ನು ವ್ಯಾಪಾರ ವಹಿವಾಟಿನ ಉದ್ದೇಶಕ್ಕೆ ಫಲಾನುಭವಿಯು ಉಪಯೋಗಿಸದೆ ಇರುವುದು ಸರ್ಕಾರವು ಗಮನಿಸಿದೆಯೇ?*

ಉ) *ಫಲಾನುಭವಿಯಿಂದ ಈ ಮಳಿಗೆಯನ್ನು ತೆರವುಗೊಳಿಸಲು ಸರ್ಕಾರವು ಕೈಗೊಂಡ ಕ್ರಮವೇನು?*

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕೆ ಸಚಿವರು) :

ಅ) ಖಿನಿಜ ಪರಿಷ್ಕರಣೆ

ಆ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ದಿನಾಂಕ 13-3-95 ರಂದು ಬೀಗಮುದ್ರೆ ಮಾಡಿರುತ್ತಾರೆ. ಆದ್ದರಿಂದ, ಮಳಿಗೆಯಲ್ಲಿ ಈಗ ವ್ಯಾಪಾರ ವಹಿವಾಟು ನಡೆಯುತ್ತಾ ಇರುವುದಿಲ್ಲ.

ಇ) ಮಳಿಗೆಯ ಮುಗಂಡ ಠೇವಣಿ ರೂಪವಾಗಿ ರೂ. 6,850-00 ಹಂಚಿಕೆದಾರರಿಂದ

ಪಡೆಯಲಾಗಿದೆ ಹಾಗೂ ಮಳಿಗೆಯ ಶೇಕಡ 99 ಮೌಲ್ಯದ ಬಾಬ್ತು ರೂ. 1,12,000-00 ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರಿಂದ ಹಂಚಿಕೆದಾರರ ಪರವಾಗಿ ಸಂದಾಯವಾಗಿರುತ್ತದೆ. ಮಳಿಗೆಯ ಪೂರ್ಣ ಮೌಲ್ಯದ ಪಾವತಿಗಾಗಿ ಇನ್ನೂ ರೂ. 19,371-00 ಮತ್ತು ತಗಲುವ ಬಡ್ಡಿ, ಬಾಕಿ ಸಂದಾಯವಾಗಬೇಕಾಗಿದೆ.

ಈ) ಇದಕ್ಕೆ (ಅ)ರಲ್ಲಿ ಉತ್ತರ ನೀಡಲಾಗಿದೆ.

ಉ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ಘಟಕದ ಬೀಗಮುದ್ರೆಯನ್ನು ದಿನಾಂಕ 13-3-95ರಲ್ಲಿ ಮಾಡಿ ಹರಾಜಿಗೆ ಪ್ರಕಟಣೆ ನೀಡಿರುತ್ತಾರೆ.

ಮಾಗಡಿ ತಾಲ್ಲೂಕಿನ ಅವ್ವೇರ ಹಳ್ಳಿಯಲ್ಲಿ ಕೈಗಾರಿಕಾ ಸ್ಥಾಪನೆ

2943 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಮಾಡಬಾಳ್ ಹೋಬಳಿ ಅವ್ವೇರಹಳ್ಳಿ ಸರ್ವೆ ನಂ. 15ರಲ್ಲಿ 50 ಎಕರೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಮೆ: ಬಿಗ್‌ಬಾಸ್ ಕಂಪನಿಗೆ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಈ ಪ್ರದೇಶದ ವ್ಯಾಪ್ತಿಯಲ್ಲಿನ ಮಂಚನಬೆಲೆ ಜಲಾಶಯದಿಂದ ಮಾಗಡಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿರುವುದರಿಂದ ಕೈಗಾರಿಕೆ ಸ್ಥಾಪಿಸಿದರೆ ಕುಡಿಯುವ ನೀರು ಕಲುಷಿತಗೊಂಡು ಪರಿಸರ ಮಾಲಿನ್ಯವಾಗಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ?

ಇ) ಇಲ್ಲಿ ಕೈಗಾರಿಕೆಗಳು ಸ್ಥಾಪಿಸಿದರೆ ಈ ಭಾಗದ ಹಲವಾರು ರೈತರು ಜಮೀನು ಕಳೆದುಕೊಂಡು ನಿರ್ಗತಿಕರಾಗುವುದಿಲ್ಲವೆ, ಸರ್ಕಾರಕ್ಕೆ ಇಲ್ಲಿನ ಸ್ಥಳೀಯ ಜನರ ವ್ಯಾಪಕ ವಿರೋಧ ಹಾಗೂ ಸ್ಥಳೀಯ ರೈತರ ಪ್ರತಿಭಟನೆ, ಅಧಿಕಾರಿಗಳ ಋಣಾತ್ಮಕ ವರದಿಯ ನಡುವೆಯೂ ಸರ್ಕಾರವು ಕೈಗಾರಿಕೆಗಾಗಿ ಬಿಗ್‌ಬಾಸ್‌ಕಂಪನಿಗೆ ಜಮೀನು ಮಂಜೂರು ಮಾಡುವುದೇ?

ಈ) ಈ ಬಗ್ಗೆ ಸರ್ಕಾರದವರ ನಿಲುವೇನು?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಸ್ಥಳೀಯರಿಂದ ಆಕ್ಷೇಪಣೆಗಳು ಬಂದಿರುವುದರಿಂದ, ಸ್ಥಳ ಪರಿಶೀಲನೆ ಮಾಡಿ, ತಕರಾರುಗಳನ್ನು ಪರಿಶೀಲಿಸಲಾಗುವುದು.